ನಕ್ಷತ್ರಪಟ



**ವಿಜಯಶ್ರೀ ಹಾಲಾಡಿ**

ಕಲೆ: ಸಂತೋಷ್ ಸಸಿಹಿತ್ಲು

# ದಾಸು ನಾಯಿಯ ನೆನಪು

ಕಾಡು ಗುಡ್ಡಗಳಿಂದ ಆವೃತವಾದ ಒಂದು ಸಣ್ಣ ಊರಿತ್ತು. ದೂರ ದೂರದಲ್ಲಿ ಒಂದೊಂದು ಮನೆಗಳು, ಮನೆಯ ಸುತ್ತ ತೋಟ, ಆ ತೋಟ ಕಾಯಲು ನಾಯಿ, ಇಲಿ ಹಿಡಿಯಲು ಬೆಕ್ಕುಗಳು... ಹೀಗೆ ಆ ಊರು ಇಂದಿಗೂ ಹಳ್ಳಿಯೇ. ಬಾಗಾಳ್ ಕಟ್ಟೆ ಎಂಬ ಹೆಸರಿನ ಆ ಊರಲ್ಲೊಂದು ಮನೆಯೇ ಇಲ್ಲದ ಹೆಣ್ಣು ನಾಯಿ ಇತ್ತು. ಜನರೆಲ್ಲ ಅದನ್ನು 'ಮೋತಿ ಮೋತಿ' ಎಂದು ಕರೆಯುತ್ತಿದ್ದರು. ಅಲ್ಲಿ ಇಲ್ಲಿ ತಿರುಗಾಡುತ್ತಾ ಅವರಿವರು ಹಾಕಿದ ಹಳಸಲು ಆಹಾರ ತಿಂದು, ರಸ್ತೆ ಬದಿಯ ದೊಡ್ಡ ಮರಗಳ ನೆರಳಲ್ಲಿ ಮಲಗಿ ಕಾಲ ಕಳೆಯುತ್ತಿತ್ತು ಮೋತಿ. ಅದು ಸಾಧು ಸ್ವಭಾವದ ನಾಯಿ. 'ಮೂಗಿಗೆ ಕಡ್ಡಿ ಹಾಕಿದರೂ ಸೀನಲು ಬರುವುದಿಲ್ಲ' ಅಂತಾರಲ್ಲ; ಆ ಥರದ ನಾಯಿ ಮೋತಿ! ನಿಜವೆಂದರೆ ಮೋತಿಗೂ ಮೊದಲೊಮ್ಮೆ ಮನೆಯಿತ್ತು. ಮನೆ ಎಂದರೆ ಅಂತಿಂಥಾ ಮನೆಯಲ್ಲ; ಶ್ರೀಮಂತರ ಮನೆ. ಆದರೇನು ಮಾಡುವುದು, ಅವರಿಗೆ ಹೈಬ್ರಿಡ್ ತಳಿಯ ನಾಯಿ ಸಾಕುವ ಆಸೆ ಬಂದು ಈ 'ಕಾಟು ನಾಯಿ' ಬೇಡವೆಂದು ಬಾಗಾಳ್ ಕಟ್ಟೆಗೆ ತಂದು ಬಿಟ್ಟಿದ್ದರು. ಯಾವುದೂ ಅರ್ಥವಾಗದ

